ಆ) ರಸ್ತೆ ಬದಿಯ ಸಸಿಗಳಿಗೆ ನೀರುಣಿಸಲು 1997-98ನೇ ಮತ್ತು 1998-99ನೇ ಸಾಲುಗಳಲ್ಲಿ ತಾಲ್ಲೂಕುವಾರುನಿಗದಿಪಡಿಸಿರುವ ಮತ್ತು ಖರ್ಚಿನ ವಿವರಗಳು ಈ ಕೆಳಕಂಡಂತೆಯಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ತಾಲ್ಲೂಕು	1997-98		1998-99	
		ನಿಗಧಿ ಪಡಿಸಿದ ಹಣ	ಖರ್ಚಾದ ಹಣ	ನಿಗಧಿ ಪಡಿಸಿದ ಹಣ	ಖರ್ಚಾದ ಹಣ
1.	ಗೋಕಾಕ್	0.572	0.572	0.436	0.436
2.	ರಾಮದುರ್ಗ	0.177	0.177	0.438	0.438
3.	ಸವದತ್ತಿ	0.895	0.895	0.860	0.624
4.	ಚಿಕ್ಕೋಡಿ	0.331	0.270	0.403	0.279
5.	ಅಥಣಿ	0.712	0.712	0.485	0.249
6.	ರಾಯಭಾಗ	0.216	0.168	0.554	0.436
7.	ಬೈಲಹೊಂಗಲ	0.387	0.387	0.412	0.412
8.	ಹುಕ್ಕೇರಿ	0.504	0.504	0.170	.0170
9.	ಬೆಳಗಾವಿ	-	-	0.158	0.158
10.	ಖಾನಾಪುರ	0.097	0.097	0.045	0.045

1998-99ನೇ ಸಾಲಿನ ರಸ್ತೆ ಅಭಿವೃದ್ಧಿ ಹಾಗೂ ಕಟ್ಟಡ ನಿರ್ಮಾಣಕ್ಕೆ ನಿಗಧಿಯಾಗಿರುವ ಆಯವ್ಯಯ

570 (645) ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998-99ನೇ ಸಾಲಿನ ಆಯವ್ಯಯದಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಕಟ್ಟಡ ನಿರ್ಮಾಣಕ್ಕೆ ಒದಗಿಸಲಾದ ಹಣ ಎಷ್ಟು?

ಆ) ಆ ಬಗ್ಗೆ ಸರ್ಕಾರ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು?

(ಇ) ತಾ: 1.4.1998ಕ್ಕೆ ಬಾಕಿಯಿದ್ದ ಬಿಲ್‌ಗಳ ಮೊತ್ತವೆಷ್ಟು?

ಶ್ರೀ ಉಮೇಶ್.ವಿ.ಕತ್ತಿ(ಲೋಕೋಪಯೋಗಿ ಸಚಿವರು)

ಅ) 1998-99ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಒದಗಿಸಲಾದ ಅನುದಾನ ಯೋಜನೆಯಲ್ಲಿ ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

(1) ರಸ್ತೆಗಳ ಅಭಿವೃದ್ಧಿ	-	2220
(2) ನಬಾರ್ಡ್ ಕಾಮಗಾರಿ	-	12000
(3) ಕಟ್ಟಡಗಳ ನಿರ್ಮಾಣ	-	7059

ಆ) 1998-99ನೇ ಸಾಲಿನಲ್ಲಿ ಇಲ್ಲಿಯವರೆಗೆ ಬಿಡುಗಡೆ ಮಾಡಲಾದ ಹಣ ಯೋಜನೆಯಡಿಯಲ್ಲಿ ಕೆಳಕಂಡಂತಿದೆ.

(1) ರಸ್ತೆಗಳ ಅಭಿವೃದ್ಧಿ	-	1028
(2) ನಬಾರ್ಡ್ ಕಾಮಗಾರಿಗಳು-		5992
(3) ಕಟ್ಟಡಗಳ ನಿರ್ಮಾಣ	-	2948

ಇ) ತಾ : 1.4. 1998ಕ್ಕೆ ಬಾಕಿ ಇದ್ದ ಬಿಲ್ಲುಗಳ ಮೊತ್ತ ಕೆಳಕಂಡಂತಿದೆ.

(1) ರಸ್ತೆಗಳ ಅಭಿವೃದ್ಧಿ	-	786.66
(2) ನಬಾರ್ಡ್ ಕಾಮಗಾರಿಗಳು-		465. 12
(3) ಕಟ್ಟಡಗಳ ನಿರ್ಮಾಣ	-	1362.80

ಮಡಿಕೇರಿ ತಾಲ್ಲೂಕಿನ ಬಲಮುರಿಯಲ್ಲಿ ನಿರ್ಮಿಸಲಾಗುತ್ತಿರುವ ಸೇತುವೆ ಕಾಮಗಾರಿ

572 (591) ಶ್ರೀ ಡಿ.ಎನ್.ಮಾದಪ್ಪ (ಮಡಿಕೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಡಿಕೇರಿ ತಾಲ್ಲೂಕಿನ ಬಲಮುರಿಯಲ್ಲಿ ನಿರ್ಮಿಸಲಾಗುತ್ತಿರುವ ಸೇತುವೆ ಕಾಮಗಾರಿಗೆ ಇಲ್ಲಿಯವರೆಗೆ ಮಾಡಲಾಗಿರುವ ವೆಚ್ಚವೆಷ್ಟು ?

ಆ) ಸೇತುವೆ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿ ಎಷ್ಟು ?

ಇ) ಮಳೆಗಾಲದಲ್ಲಿ ಸಂಚಾರಕ್ಕೆ ತೀವ್ರ ಅಡಚಣೆ ಯಾಗುತ್ತಿರುವುದರಿಂದ ಅದನ್ನು ಸರ್ಕಾರ ಮುಂದಿನ ಜೂನ್ ತಿಂಗಳೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಉಮೇಶ್.ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) ರೂ. 134. 199 ಲಕ್ಷಗಳು. (ಜನವರಿ 1999ರ ಅಂತ್ಯದವರೆವಿಗೆ).